Sri Padmanabha Theertharu

(NavaBrundavana - Anegondi)



Sri Padmanabha Theertharu is foremost among the direct disciples of Sri Madhvacharyaru outside Udupi Ashta Matha Yathis. A noble and blessed soul who had the fortune of succeeding Sri MadAacharyaru to the Sarvajna Peeta.

A contemporary, disciple of Sri Ananda Theertharu, Sri Padmanabha Theertharu was known as Shobana Bhatta in his poorvaAshrama. Purported to be hailing from Rajamahendravaram (Rajahmundry), he was a renowned Advaita scholar, Aasthaana Vidvaamsa in the Kakathiya kingdom, Orugallu.

" ಬದರಿಕಾಶ್ರಮಾತ್ ಆಗಮನ ಕಾಲೇ

ಯೋ ಆಗತಃ ಸ ಏವ ಶೋಭನಭಟ್ಟ:

ಅಯಂ ಪದ್ಮನಾಭತೀರ್ಥ: "

Shobhana Bhatta first time met Sri Madhvacharya (while returning from BadarikaAshrama) on the banks of Godavari and invited him to participate in a debate which he had arranged.

He was defeated by SriMadAachaaryaru in a philosophical debate, that has paved the way for his entry into Dvaita Matha and accepting Sri MadAacharyaru as his Guru.

In this context we find a reference in Sri MadhvaVijaya - Sarga-9 sloka # 17, wherein Sri MadAacharyaru on his way back from Badari Kshethra having met Shobana Batta on the banks of river Godavari in Andhra Desa.

ಯಸ್ರಯಃ ಸಕಲ ಪಕ್ಷಶಿಕ್ಷಕಸ್ತತ್ರ ಸಂಸದಿ ವರಿಷ್ಠ ಸಮ್ಮತ: ।

ಶೋಭನೋಪಪದಭಟ್ಟನಾಮಕಃ ಪೂರ್ಣಸಂಖ್ಯಮನಮನ್ಮುಹುರ್ಮುದಾ ।।

Similarly in Sarga 15 (sloka120-126) also we find a reference to Sri Padmanabha Theertharu the worshipful successor of Sri Madhvacharyaru and his scholarly prowess.

Sri Padmanabha Theertharu was the first Aashrama sishya of Sri Madhvacharya and is foremost among the commentators (Teekakara) on Sri Madhvacharya's works.

Sri Jayatirtharu owes his scholarship to Sri Padmanabha Theertharu and quotes (NyayaDeepika)

ಸ ಪದ್ಮನಾಭ ತೀರ್ಥಾಖ್ಯಯೋಗಿನೋಸ್ತು ದೃಶೇ ಮಮ |

ನ ತತ್ತ್ವ ಮಾರ್ಗೋ ಗಮನಂ ವಿನಾ ಯದುಪಜೀವನಮ್ ।।

स पद्मनाभ तीर्थाख्ययोगिनोस्तु दृशे मम |
न तत्त्वमार्गो गमनं विना यदुपजीवनम् ॥

sa padmanābha tīrthākhyayoginostu dṛśe mama |
na tattvamārgo gamanaṃ vinā yadupajīvanam ||

We cannot proceed in the direction of truth without whose blessings, let the light called Sri Padmanabha Tirtha lead me in the right path.

Further Sri Jayatheertharu quotes in his Tatvaprakashika…

ಶ್ರೀಮಧ್ವಸಂಸೇವನ ಲಬ್ಧಶುದ್ಧವಿದ್ಯಾಸುಧಾಂಭೋ ನಿಧಯೋಽಮಲಾ ಯೇ |
ಕೃಪಾಲವ: ಪಂಕಜನಾಭತೀರ್ಥಾ: ಕೃಪಾಲವ: ಸ್ಯಾನ್ಮಯಿ ನಿತ್ಯಮೇಷಾಂ |

श्रीमध्वसंसेवन लब्दशुद्धविद्यासुधांभो निधयोऽमला ये ।
कृपालव: पंकजनाभतीर्था: कृपालव: स्यान्मयि नित्यमेषां ।

Here Jayatirtharu compares Padmanabha Tirtharu to the milky ocean (ksheera samudra). Padmanabha Tirtharu earned the pure vidya through his seva of Acharya Madhwa. His heart is very much pure, and pray him to offer some kaarunya on us also.

ಶ್ರೀ ವ್ಯಾಸರಾಜ ಗುರುಸಾರ್ವಭೌಮರು…

ಶಾರದಾವಾಸವದನ ಶಾರದಾಂಬುರುಹಾನ್ ಮುಹು: ।

ಪದ್ಮನಾಭಮುನೀನ್ ವಂದೇ ಸರ್ವಶಾಸ್ತ್ರವಿಶಾರದಾನ್ ।।

www.bhargavasarma.blogspot.com

" ಶ್ರೀ ನರಹರಿತೀರ್ಥರು ಯಮಕಭಾರತ ಟೀಕಾ " ದಲ್ಲಿ...

ಯೇ ಭಾರತೇನ ಸತತಂ ಹಿ ಪರಿವ್ರಜಂತಿ

ಭಾಷಾಸು ರೀತಿಶತಕೇ ಚತುರಾ ಅನಂತಮ್ ।

ತತ್ಪಾದಪಂಕಜನವಾಯುಕೃತೋರುಮಾರ್ಗಾ:

ತಾನ್ ಪದ್ಮನಾಭತೀರ್ಥ ಗುರೂನ್ನಮಾಮಿ ।।

" ಬ್ರಹ್ಮಾಂಡ ಪುರಾಣ - ರಜತಪೀಠ ಮಹಾತ್ಮ್ಯೇ " ಯಲ್ಲಿ...

ತಂ ಮಧ್ವಮಾರುತಂ ಸರ್ವೇ ಪರಿವಾರತಯಾ ಸದಾ ।

ಸಂಸೇವಿತುಂ ಸುರಾ ಭೂಮೌ ಅವತೇರುರಿತಿ ಶ್ರುತಂ ।।

ತೇ ಚ ತಚ್ಛಿಷ್ಯತಾಂ ಪ್ರಾಪ್ಯ ತನ್ಮಾರ್ಗಂ ಸಮಘೋಷಯನ್ ।

ತೇಷು ಮುಖ್ಯೌ ವಿಷ್ಣುತೀರ್ಥ ಪದ್ಮನಾಭಯೋಗಿನೌ ।।

śrī padmanābhatīrthara graṃthagaḷu

1. māyāvāda khaṃḍana ṭīkā,
2. upādhikhaṃḍanaṭīkā (nyāyāvalī)
3. prapaṃca mithyātvānumāna khaṃḍana ṭīkā.
4. kathālakṣaṇa ṭīkā,
5. gītā bhāṣya prācīna ṭīkā, (bhāvapradīpikā)
6. gītā tātparya nirṇaya ṭīkā (prakāśikā)
7. sattarka dīpāvali (śrīmadbrahmasūtrabhāṣyaṭīkā)
8. sannyāya ratnāvaḷi, (anuvyākhyāna ṭīkā)
9. tatyodyota ṭīkā,
10. pramāṇa lakṣaṇa ṭīkā,
11. viṣṇutatvanirṇaya ṭīkā (nyāyaratnāvalī)
12. vāyulīlāvistaraṇa
13. tatvaviveka ṭīkā

www.bhargavasarma.blogspot.com

14. karmanirṇaya ṭīkā

15. ānaṃdamālā

16. tatvasaṃkhyāna ṭīkā

He was in Peeta for nearly seven years during 1317-1324 conducting Sri MoolaRAma Devara Pooja and propagating Sri MadAachaarya's philosophy – Dvaita-TattvaVaada - Hari Sarvottamatva - Vaayu Jeevottamatva.

Sri NaraHari TheErtharu, a contemporary and a prominent disciple of Sri Madhvacharyaru succeeded Sri Padmanatha Theertharu.

Moola Brundavana of Sri Padmanabha Theertharu is at Anegondi - NavaBrundavana Gaddhe on the banks of TungaBhadra River and his Aaraadhana is on Karthika Bahula Chaturdasi.

ಪೂರ್ಣಪ್ರಜ್ಞಕೃತಂಭಾಷ್ಯಮಾದೌ ತದ್ಭಾವಪೂರ್ವಕಮ್ |
ಯೋ ವ್ಯಾಕರೋ ನಮಸ್ತಸ್ಮೈ ಪದ್ಮನಾಭಾಖ್ಯ ಯೋಗಿನೇ ||

॥ पूर्णप्रज्ञकृतं भाष्यमादौ तद्भावपूर्वकम्।
यो व्याकरोन्नमस्तस्मै पद्मनाभाख्ययोगिने॥

ಪೂರ್ಣಪ್ರಜ್ಞಕೃತಂಭಾಷ್ಯಮಾದೌ ತದ್ಭಾವಪೂರ್ವಕಮ್ |
ಯೋ ವ್ಯಾಕರೋ ನಮಸ್ತಸ್ಮೈ ಪದ್ಮನಾಭಾಖ್ಯ ಯೋಗಿನೇ ||

|| pUrNapraj~nakR^itaM bhAShyamAdau tadbhAvapUrvakam |
yo vyAkaronnamastasmai padmanAbhAkhyayogine ||

www.bhargavasarma.blogspot.com

There is a Mruttika Brundavana of Sri Padmanabha Theertharu at Sri Narasimha Theertha - Mulabagalu besides Sri SreePaAdaRajara Moola Brundavana. He is Moolapurusha for Sripadaraja Mutta. It is that heritage, SripadaRaja Matha at Mulabagalu originally known as Sri PadmanabhaTheerthara Matha became SripadaRaja Matha since the reign of Sri SripadaRajaru.

www.bhargavasarma.blogspot.com

[Mruttika Brundavana of Sri Padmanabha Theertharu at Sri Narasimha Theertha – Mulabagalu]

ಹಂಸಪೀಠದ ರತ್ನ ಪದ್ಮನಾಭತೀರ್ಥರು

ಆಚಾರ್ಯ ಮಧ್ವರ ಮೊದಲ ಶಿಷ್ಯರೇ ರಾಜಗುರು ಶೋಭನ ಭಟ್ಟಾರಕರು. ಮಧ್ವಾಚಾರ್ಯರ ಪ್ರಖಂಡ ಪಾಂಡಿತ್ಯಕ್ಕೆ ಬೆರಗಾಗಿ ಅವರ ಶಿಷ್ಯರಾದರು. ಪದ್ಮನಾಭತೀರ್ಥ ನಾಮಾಂಕಿತರಾಗಿ ಹಂಸಪೀಠವನ್ನು ಅಲಂಕರಿಸಿದರು. ಉಡುಪಿ ಕೃಷ್ಣನ ಪ್ರಭೆಯನ್ನು ದೇಶದುದ್ದಗಲಕ್ಕೂ ಪಸರಿಸಿದ ಕೀರ್ತಿ ಇವರದು. ಇವರ ಕಾರಣದಿಂದಾಗಿ ವೈಷ್ಣವ ಮತ ಈ ದೇಶದ ಪ್ರಧಾನ ಉಪಾಸನಾ ಮಾರ್ಗವಾಯಿತು. ಎಲ್ಲಾ ರಾಜ್ಯ, ಎಲ್ಲಾ ಭಾಷೆಗಳಲ್ಲಿ ಬೆಳೆಯಲು ಸಾಧ್ಯವಾಯಿತು.

ಡಾ. ಮಳಗಿ ಜಯತೀರ್ಥಾಚಾರ್
feedback@bodhivruksha.com

ಶ್ರೀ ಹಂಸಪೀಠದ ಉತ್ತರಾಧಿಕಾರಿಗಳು. ಶ್ರೀಮಧ್ವರ ಸಾಕ್ಷಾತ್ ಶಿಷ್ಯರೇ ಪದ್ಮನಾಭತೀರ್ಥರು. ಅಂದಿನ ವಿದ್ವತ್ ಪ್ರಪಂಚದ ಚಕ್ರವರ್ತಿಗಳು. ಪೂರ್ವಾಶ್ರಮದಲ್ಲಿ ಕಾವೇರಿಯಿಂದ ಗೋದಾವರಿಯವರೆಗೂ ಹರಡಿದ ಅಂದಿನ ಕರ್ನಾಟಕಕ್ಕೆ ಇವರೇ ಗುರುಗಳು. ಆಚಾರ್ಯ ಮಧ್ವರು ಬದರಿಯಿಂದ ಬರುವಾಗ ಗೋದಾ ತೀರಕ್ಕೆ ಬಂದರು. ಅಲ್ಲಿ ಕಾಕತೀಯ ಗಣಪತಿದೇವನ ಆಸ್ಥಾನ ಮಂತ್ರಿಗಳು ಶೋಭನಭಟ್ಟಾರಕರು. ಹದಿನಾಲ್ಕು ಶಾಸನಗಳಲ್ಲಿ ಸರಿಸಾಟಿ ಇಲ್ಲದ ವಿದ್ವಾಂಸರು ಇವರು. ಶ್ರೀ ಮಧ್ವರ ಸನ್ನಿಧಾನಕ್ಕೆ ಬಂದರು. ಆಮೇಲಿಂದ ಭಾಷ್ಯ ಕೇಳಿದರು.

ಸುಮಧ್ವವಿಜಯ ಶೋಭನಭಟ್ಟರ ವ್ಯಕ್ತಿತ್ವವನ್ನು 'ಯಸ್ತಯೀ ಸಕಲ ಪಕ್ಷ ತಿಕ್ಷಕ' ಎಂಬತ್ಯಾದಿ ಅದ್ಭುತ ಶಬ್ದಗಳಿಂದ ವರ್ಣಿಸುತ್ತದೆ. ಶೋಭನಭಟ್ಟರು ಕಾಕತೀಯ ಸಂಸ್ಥಾನದ ರಾಜಗುರುಗಳು. ಅವರು ಏರ್ಪಡಿಸಿದ್ದ ಸಭೆಗೆ ಭಾರತದ ಮೂಲೆಮೂಲೆಗಳಿಂದ ವಿದ್ವಾಂಸರು ಬಂದಿದ್ದರು. ಈ ಸಭೆಗೆ ವಿಶ್ವಗುರು ಮಧ್ವಾಚಾರ್ಯರು ಆನಿರೀಕ್ಷಿತವಾಗಿ ಆಗಮಿಸಿದರು. ಸಭೆ ಆರಂಭವಾಯಿತು. ಸಭೆಯಲ್ಲಿ ಮಂಡನೆಯಾದ ಅದ್ವೈತ, ವಿಶಿಷ್ಟಾದ್ವೈತ, ಮೀಮಾಂಸ, ತರ್ಕ, ವ್ಯಾಕರಣ ಕುರಿತಂತೆ ಪಂಡಿತರು ತಮ್ಮ ವಾದ ಮಂಡಿಸಿದರು. ಅವರೆಲ್ಲರ ಪ್ರಶ್ನೆಗೆ ಆಚಾರ್ಯ ಮಧ್ವರು ಸಮರ್ಪಕವಾಗಿ ಉತ್ತರಿಸಿದರು.

ಆಚಾರ್ಯ ಮಧ್ವರ ತಲಸ್ಪರ್ಶಿ ಉತ್ತರಗಳಿಂದ ವಿದ್ವತ್ ಸಭೆಯಲ್ಲಿ ನೆರೆದಿದ್ದ ಪಂಡಿತರ ಹಮ್ಮು ಕರಗಿತು. ಕೂಡಲೇ ಆಚಾರ್ಯ ಮಧ್ವರು ಬ್ರಹ್ಮಸೂತ್ರ ಭಾಷ್ಯ ಪ್ರವಚನ ಪ್ರಾರಂಭಿಸಿದರು. ಎಲ್ಲ ಮತಗಳನ್ನು ಒರೆಗಲ್ಲಿಗೆ ಹಚ್ಚಿದರು. ಪ್ರಮಾಣಗಳ ಆಧಾರ, ಯುಕ್ತಿಯ ಬಲದಿಂದ ಎಲ್ಲರ ಲೋಪದೋಷಗಳನ್ನು ತೀಕ್ಷಿಸಿದರು. ಶೋಭನಭಟ್ಟರು ಮಾಡಿದ ಹದಿನಾಲ್ಕು ಶಾಸ್ತ್ರದ ಆಕ್ಷೇಪಗಳಿಗೆ ಹದಿನಾಲ್ಕು ನಿಮಿಷಗಳಲ್ಲಿ ಉತ್ತರಿಸಿದರು. ಆಚಾರ್ಯ ಮಧ್ವರ ಭಾಷ್ಯ ಕೇಳಿದ ಶೋಭನಭಟ್ಟರ ಹೃದಯ ಕುಂಬಬಂತು. ಕೂಡಲೇ ಅವರ ಪಾದಕ್ಕೆ ಎರಗಿದರು. ನಿಮ್ಮ ಪಾದಪದ್ಮದ ಧೂಳಿಯ ದಾಸ್ಯವನ್ನು ಕರುಣಿಸಿ ಎಂದು ಕೇಳಿಕೊಂಡರು. ಮಧ್ವರ ಶಿಷ್ಯರಾದರು. ತಮ್ಮೊಂದಿಗೆ ಸಾವಿರಾರು ವಿದ್ವಾಂಸರನ್ನು ಶ್ರೀ ಮಧ್ವರ ವಿಚಾರ ಸರಣಿಗೆ ತಂದರು. ಎಲ್ಲರೂ ಶಿಷ್ಯರಾದರು.

ಮೊದಲ ಶಿಷ್ಯರು

ಹೀಗೆ ಆಚಾರ್ಯ ಮಧ್ವರ ಮೊದಲ ಶಿಷ್ಯರೇ ರಾಜಗುರು ಶೋಭನ ಭಟ್ಟಾರಕರು. ಕಲಿಂಗದ ಗಜಪತಿ ಆನಂಗಭೀಮನ ಮಹಾಮಂತ್ರಿ ಶಾಮಶಾಸ್ತ್ರಿಗಳು, ಜಂಬುಖಂಡಿಯ ರಾಜಗುರು ಯಜುರ್ವೇದೀ ವಿಷ್ಣುಶಾಸ್ತ್ರಿಗಳು, ಕದಂಬರ ಮಹಾಮಂತ್ರಿ ಗೋವಿಂದ ಭಟ್ಟಾರಕರು ಎಲ್ಲರೂ ಆಚಾರ್ಯ ಮಧ್ವರ ಸಿದ್ಧಾಂತವನ್ನು ಒಪ್ಪಿಕೊಂಡು ಅವರ ಪಾದಕ್ಕೆರಗಿ ಶಿಷ್ಯರಾದರು. ಶಾಸ್ತ್ರಜ್ಞಾನಕ್ಕಾಗಿ ಮನೆ, ಮಠ, ಮಂತ್ರಿ ಪದವಿ ತೊರೆದರು. 1180 ಶಕ ಪಿಂಗಲ ಸಂವತ್ಸರ ವೈಶಾಖ ಶುದ್ಧ ಸಪ್ತಮಿಯಂದು ಇವರೆಲ್ಲರಿಗೂ ಕಣ್ವತೀರ್ಥದಲ್ಲಿ ಸನ್ಯಾಸ ನೀಡಿದರು.

ಶೋಭನಭಟ್ಟರಿಗೆ ಪದ್ಮನಾಭ ತೀರ್ಥರೆಂದು, ಶಾಮಶಾಸ್ತ್ರಿಗಳಿಗೆ ನರಹರಿ ತೀರ್ಥರೆಂದು, ವಿಷ್ಣುಶಾಸ್ತ್ರಿಗಳಿಗೆ ಮಾಧವ ತೀರ್ಥರೆಂದು, ಗೋವಿಂದಭಟ್ಟರಿಗೆ ಅಕ್ಷೋಭ್ಯ ತೀರ್ಥರೆಂದು ಹೆಸರಿಸಿದರು.

ಪದ್ಮನಾಭತೀರ್ಥರನ್ನು ಹಂಸಪೀಠದ ಉತ್ತರಾಧಿಕಾರಿಯಾಗಿಸಿದರು ಆಚಾರ್ಯ ಮಧ್ವರು. ಅದರ ಸಂಕೇತವಾಗಿ ಮೂಲ ಸನ್ಯಾಸದ ಸಕಲ ಪ್ರತಿಮೆ, ಸಂಪತ್ತಿನ ಅಧಿಕಾರ ನೀಡಿದರು. ದೇಶದೆಲ್ಲೆಡೆ ವೈಷ್ಣವ ದೀಕ್ಷೆ ಪಸರಿಸುವ ನಿಟ್ಟಿನಲ್ಲಿ ದಿಗ್ವಿಜಯ ರಾಮಚಂದ್ರ ದೇವರನ್ನು ಹಾಗೂ ಅಧಿಕಾರವನ್ನು ನೀಡಿದರು. ಕಳಿಂಗರಾಜ್ಯವಾಳಿ ಬಂದ ನರಹರಿತೀರ್ಥರು ತಮ್ಮೊಂದಿಗೆ ತಂದ ಚತುರ್ಯುಗ ಮೂರ್ತಿ, ಶ್ರೀಮೂಲಸೀತಾ, ಮೂಲರಾಮ ದೇವರನ್ನು ಮೂರು ತಿಂಗಳುಗಳ ಕಾಲ ಪೂಜಿಸಿದ ಮಧ್ವರು ಮುಂದೆ ಪದ್ಮನಾಭ ತೀರ್ಥರಿಗೆ ನೀಡಿದರು. ಆದರೊಂದಿಗೆ ರಾಮಮುದ್ರೆಯ ನಾಣ್ಯ, ನಾಲ್ಕು ಸಾಲಿಗ್ರಾಮ, ಮೂರು ಸುದರ್ಶನ ಸೇರಿದಂತೆ ಒಟ್ಟು ಮೂವತ್ತು ಮಹಾಸಂಸ್ಥಾನವೆನಿಸುವ ಪದಾರ್ಥಗಳನ್ನು ಗುರು ಮಧ್ವರು ಪದ್ಮನಾಭತೀರ್ಥರಿಗೆ ಕೊಟ್ಟರು.

ದೇಶದುದ್ದಗಲ ಸಂಚಾರ

ಆಚಾರ್ಯ ಮಧ್ವರ ಸೂಚನೆಯಂತೆ ದೇಶವನ್ನೆಲ್ಲಾ ಸುತ್ತಿದರು. ಶ್ರೀ ಪದ್ಮನಾಭತೀರ್ಥರು ಆಚಾರ್ಯ ಮಧ್ವರ ಆನುವ್ಯಾಖ್ಯಾನ ಗ್ರಂಥಕ್ಕೆ 'ಸನ್ಯಾಯ ರತ್ನಾವಳಿ', ಬ್ರಹ್ಮಸೂತ್ರಭಾಷ್ಯಕ್ಕೆ 'ಸತ್ಕರ್ಮದೀಪಾವಳಿ', ಗೀತಾಭಾಷ್ಯ, ತಾತ್ಪರ್ಯಗಳಿಗೆ ಪ್ರಕಾಶಿಕಾ ಮೊದಲಾದ ಹದಿನಾರು ಕೃತಿಗಳನ್ನು ರಚಿಸಿದರು. ಅದ್ಯಟೀಕಾಕಾರರೆನಿಸಿದರು. ಇವರ ಮೂಲಕ, ಕೃತಿಗಳ ಮಾರ್ಗದರ್ಶನವಿಲ್ಲದೇ ತತ್ತ್ವಜ್ಞಾನದ ಮಾರ್ಗದಲ್ಲಿ ಯಾರೂ ಮುಂದುವರೆಯಲಾರರು ಎನ್ನುತ್ತಾರೆ ಶ್ರೀ ಜಯತೀರ್ಥರು. ಪದ್ಮನಾಭತೀರ್ಥರು ಶ್ರೀ ನರಹರಿ ತೀರ್ಥರಿಗೆ ಮೂಲಸಂಸ್ಥಾನ ಒಪ್ಪಿಸಿದರು. ರಕ್ತಾಕ್ಷಿ ಸಂವತ್ಸರ ಕಾರ್ತಿಕ ಕೃಷ್ಣ ಚತುರ್ದಶಿಯಂದು ಆನೆಗೊಂದಿಯಲ್ಲಿ ವೃಂದಾವನ ಪ್ರವೇಶಿಸಿದರು. ಉಡುಪಿ ಕೃಷ್ಣನ ಪ್ರಭೆಯನ್ನು ದೇಶದುದ್ದಗಲಕ್ಕೂ ಪಸರಿಸಿದ ಕೀರ್ತಿ ಇವರದು. ಇವರ ಕಾರಣದಿಂದಾಗಿ ವೈಷ್ಣವ ಮತ ಈ ದೇಶದ ಪ್ರಧಾನ ಉಪಾಸನಾ ಮಾರ್ಗವಾಯಿತು. ಎಲ್ಲಾ ರಾಜ್ಯ, ಎಲ್ಲಾ ಭಾಷೆಗಳಲ್ಲಿ ಬೆಳೆಯಲು ಸಾಧ್ಯವಾಯಿತು. ●

- ಡಾ. ಮಳಗಿ ಜಯತೀರ್ಥಾಚಾರ್ ಅವರು ಅಧ್ಯಾತ್ಮ ಚಿಂತಕರು ಹಾಗೂ ಉಪನ್ಯಾಸಕರು.
ಪುಟ ತಿರಿಲ್ಲಿ ನವ ವೃಂದಾವನ ಮಾಹಿತಿ

ಜ್ಞಾನ ನಿಧಿ

ಸುಜ್ಞಾನ ದೀಪಿಕರಿವರು

ಪೂರ್ಣಪ್ರಜ್ಞಕೃತಂ ಭಾಷ್ಯಮಾದೌ ತದ್ವ್ಯಾಖ್ಯಾನಂ ತದರ್ಥಾವಲಿಂ ಯೋ ವ್ಯಾಕರೋನ್ನಮಸ್ತಸ್ಮೈ, ಪದ್ಮನಾಭಾಖ್ಯಾಯೋಗಿನೇ॥

ಆಚಾರ್ಯ ಮಧ್ವರ ನೇರ ಶಿಷ್ಯರಲ್ಲಿ ಪದ್ಮನಾಭತೀರ್ಥರೇ ಪ್ರಮುಖರು. ಪದ್ಮನಾಭ ತೀರ್ಥರು ಪ್ರಕಾಂಡ ಪಂಡಿತರು. ಅಷ್ಟೇ ವಿನಯಶಾಲಿಗಳು. ಉತ್ತರಾದಿ ಮಠದ ಆದ್ಯರ್ಯಗಳು. ಆಚಾರ್ಯ ಮಧ್ವರ ಭಾಷ್ಯಕ್ಕೆ ಟೀಕೆ ಬರೆದ ಪ್ರಪ್ರಥಮ ಶಿಷ್ಯರು. ಶ್ರೀ ಪದ್ಮನಾಭತೀರ್ಥರ ಎದ್ದತ್ತಿನ ಬಗ್ಗೆ ಶ್ರೀ ಜಯತೀರ್ಥರು ತಮ್ಮ ನ್ಯಾಯಸುಧಾದಲ್ಲಿ ಬಹುವಾಗಿ ವರ್ಣಿಸಿದ್ದಾರೆ. ಪದ್ಮನಾಭ ತೀರ್ಥರನ್ನು ಸಮುದ್ರಕ್ಕೆ ಶ್ರೀ ಜಯತೀರ್ಥರು ಹೋಲಿಸುತ್ತಾರೆ. ಸಮುದ್ರ ಲಕ್ಷ್ಮೀದೇವಿಯ ತವರುಮನೆ ಆಥವಾ ಆವಾಸ ಸ್ಥಾನ. ಮತ್ತು ನಾನಾವಿಧವಾದ ರತ್ನಗಳಿಗೆ ಉಗಮ ಸ್ಥಾನ. ಇಂತಹ ಲಕ್ಷ್ಮೀದೇವಿಗೆ ಪತಿಯಾದ ಪರಮಾತ್ಮನಿಗೂ ಆವಾಸ ಸ್ಥಾನವಾಗಿದ್ದಾರೆ. ಇವರು ಸನ್ಯಾಯ ರತ್ನಾವಳಿ ಎಂಬ ಗ್ರಂಥವನ್ನು ರಚಿಸಿದ್ದಾರೆ. ಸಮುದ್ರವು ನಮಗೆ ರತ್ನಗಳನ್ನು ಕೊಡುವಂತೆ ಶ್ರೀ ಪದ್ಮನಾಭ ತೀರ್ಥರು ಸಹ ನಮಗೆ ಜ್ಞಾನ ಸಂಪತ್ತನ್ನು ಕೊಟ್ಟಿದ್ದಾರೆ ಎಂದು ನ್ಯಾಯಸುಧಾದಲ್ಲಿ ಜಯತೀರ್ಥರು ಸ್ತುತಿಸಿದ್ದಾರೆ.

Sri padmanabha thirtharu rachisida moola geetha bhashya.
Mulabaagilu

nAham kArtA hAriH kArtA

Hari Sarvottama – Vaayu Jeevottama

" ಶ್ರೀ ಪದ್ಮನಾಭತೀರ್ಥರ ಸಂಕ್ಷಿಪ್ತ ಮಾಹಿತಿ "

ಹೆಸರು : ಶ್ರೀ ಶೋಭನಭಟ್ಟರು

ಕಾಲ : ಕ್ರಿ ಶ **1317 - 1324**

ಮೂಲ ರೂಪ : ಶ್ರೀ ಶೇಷದೇವರು

ಕಕ್ಷೆ : **5**

ಆಶ್ರಮ ಗುರುಗಳು : ಶ್ರೀಮದಾಚಾರ್ಯರು

ಆಶ್ರಮ ನಾಮ : ಶ್ರೀ ಪದ್ಮನಾಭತೀರ್ಥರು

ಗ್ರಂಥಗಳು :

1. ಅನುವ್ಯಾಖ್ಯಾನ ಟೀಕಾ

(ಸನ್ನ್ಯಾಯ ರತ್ನಾವಳೀ **)**

2. ಶ್ರೀ ಬ್ರಹ್ಮಸೂತ್ರ ಭಾಷ್ಯ ಟೀಕಾ

(ಸತ್ತರ್ಕ ದೀಪಾವಲೀ **)**

3. ಗೀತಾ ಭಾಷ್ಯ ಟೀಕಾ

(ಭಾವ ಪ್ರದೀಪಿಕಾ **)**

4. ಗೀತಾ ತಾತ್ಪರ್ಯ -

ನಿರ್ಣಯ ಟೀಕಾ **(** ಪ್ರಕಾಶಿಕಾ **)**

5. ವಿಷ್ಣು ತತ್ತ್ವ ನಿರ್ಣಯ ಟೀಕಾ

(ನ್ಯಾಯ ರತ್ನಾವಳೀ **}**

6. ತತ್ತ್ವೋದ್ಯೋತ ಟೀಕಾ

www.bhargavasarma.blogspot.com

7. ತತ್ತ್ವ ಸಂಖ್ಯಾನ ಟೀಕಾ

8. ತತ್ತ್ವ ವಿವೇಕ ಟೀಕಾ

9. ಉಪಾಧಿ ಖಂಡನ ಟೀಕಾ

(ನ್ಯಾಯಾವಲೀ)

10. ಮಾಯವಾದನ ಖಂಡನ ಟೀಕಾ

11. ಪ್ರಪಂಚಮಿಥ್ಯಾತ್ವಾನುಮಾನ ಖಂಡನ ಟೀಕಾ

12. ಪ್ರಮಾಣ ಲಕ್ಷಣ ಟೀಕಾ

13. ಕಥಾ ಲಕ್ಷಣ ಟೀಕಾ

14. ಕರ್ಮ ನಿರ್ಣಯ ಟೀಕಾ

15. ವಾಯುಲೀಲಾ ವಿಸ್ತರಣ

16. ಆನಂದಮಾಲಾ

ಮೊದಲಾದ **16** ಗ್ರಂಥಗಳನ್ನು ಶ್ರೀ ಪದ್ಮನಾಭತೀರ್ಥರು ರಚಿಸಿದ್ದಾರೆ.

ಮೂಲ ವೃಂದಾವನ :

ನವ ವೃಂದಾವನ ಗಡ್ಡೆ

ಮೃತ್ತಿಕಾ ವೃಂದಾವನ :

ಶ್ರೀ ಶ್ರೀಪಾದರಾಜರ ಮೂಲ ವೃಂದಾವನ ಸನ್ನಿಧಾನ, ಮುಳಬಾಗಿಲು.

ಆರಾಧನೆ :

ಕಾರ್ತೀಕ ಬಹುಳ ಚತುರ್ದಶೀ

ಸಾಕ್ಷಾತ್ ಹಂಸನಾಮಕ ಪರಮಾತ್ಮನಿಂದ ಅವಿಚ್ಛಿನ್ನವಾಗಿ ನಡೆದು ಬಂದ ಸತ್ಪರಂಪರೆಯಲ್ಲಿ ಶ್ರೀ ಚತುರ್ಮುಖ ಬ್ರಹ್ಮದೇವರನ್ನು ಮೊದಲ್ಗೊಂಡು ಶ್ರೀ ಪ್ರಾಜ್ಞತೀರ್ಥರು, ಶ್ರೀ

www.bhargavasarma.blogspot.com

ಅಚ್ಯುತಪ್ರೇಕ್ಷಾಚಾರ್ಯರ ವರೆಗೂ ರಕ್ಷಿತವಾದ ಸದ್ವೈಷ್ಣವ ಸಂಪ್ರದಾಯ ಪರಂಪರೆಯನ್ನು ನಿರ್ವಹಿಸುವ ಭಾರವನ್ನು ಶ್ರೀಮದಾಚಾರ್ಯರು ಅರ್ಹರಾದ ಶ್ರೀ ಪದ್ಮನಾಭತೀರ್ಥರಿಗೆ ವಹಿಸಿಕೊಟ್ಟರು.

ದ್ವೈತ ವೇದಾಂತ ದಿಗ್ವಿಜಯ ಸಾಮ್ರಾಜ್ಯದಲ್ಲಿ ಶ್ರೀಮದಾಚಾರ್ಯರ ತರುವಾಯ ದ್ವೈತ ವೇದಾಂತ ದಿಗ್ವಿಜಯ ವಿದ್ಯಾ ಸಿಂಹಾಸನದಲ್ಲಿ ಪಟ್ಟಾಭಿಷಿಕ್ತರಾದ ಚಕ್ರವರ್ತಿಗಳೆಂದರೆ ಶ್ರೀ ಪದ್ಮನಾಭತೀರ್ಥರು.

" ಶ್ರೀ ಪದ್ಮನಾಭತೀರ್ಥರ ಪೂರ್ವೇತಿಹಾಸ "

ಶ್ರೀ ಪದ್ಮನಾಭತೀರ್ಥರ ಪೂರ್ವಾಶ್ರಮ ಹೆಸರು ಶ್ರೀ ಶೋಭನಭಟ್ಟರು.

ಇವರು ಗೋದಾವರೀ ತೀರದ ವರಂಗಲ್ (ಓರಂಗಲ್) ರಾಜಾಸ್ಥಾನದಲ್ಲಿ ಆಸ್ಥಾನ ವಿದ್ವಾಂಸರಾಗಿದ್ದರು.

ಸಮಗ್ರ ಉತ್ತರ ಪಥದ ಪಂಡಿತ ಚಕ್ರವರ್ತಿ; ರಾಜಕಾರಣದಲ್ಲಿ ಸೂತ್ರಧಾರ - **14** ಶಾಸ್ತ್ರ ಭಾಗಗಳ ಅಧ್ಯಕ್ಷರು ಶ್ರೀ ಶೋಭನಭಟ್ಟರು.

ಶ್ರೀಮದಾಚಾರ್ಯರ ಮುಖ್ಯ ಶಿಷ್ಯರಾಗಿ ಶ್ರೀಮದಾಚಾರ್ಯರ ಗ್ರಂಥಗಳ ಪ್ರಪ್ರಥಮ ಟೀಕಾಕಾರರೆನಿಸಿದವರು.

ಈ ವಿಷಯವು ಸುಮಧ್ವ ವಿಜಯ **9**ನೇ ಸರ್ಗದ **17**ನೇ ಶ್ಲೋಕದಲ್ಲಿ ಉಲ್ಲೇಖಿತವಾಗಿದೆ.

ಯಸ್ತ್ರಯೀ ಸಕಲ ಪಕ್ಷ ಶಿಕ್ಷಕ

ಸ್ತತ್ರ ಸಂಸದಿ ವರಿಷ್ಠಸಮ್ಮತಃ ।

ಶೋಭನೋಪ ಪದ ಭಟ್ಟ ನಾಮಕಃ

ಪೂರ್ಣ ಸಂಖ್ಯ ಮನನ್ಮುಹುರ್ಮುದಾ ।।

ವೇದಗಳಿಗೆ ಸಂಬಂಧಿಸಿದ ಸಕಲ ಸಿದ್ಧಾಂತಗಳನ್ನೂ ನಿರ್ಣಯಿಸಿ ತಿಳಿಸುವಲ್ಲಿ ಸಮರ್ಥರಾಗಿದ್ದ ಆ ಸಭೆಯಲ್ಲಿ ಇವರೇ ಶ್ರೇಷ್ಠರು (ಶೋಭನ ಭಟ್ಟರೇ) ಸಾಮಾನ್ಯರಾಗಿದ್ದ ಶ್ರೀ

www.bhargavasarma.blogspot.com

ಶೋಭನಭಟ್ಟರೆಂಬುವರು ಶ್ರೀ ಪೂರ್ಣಪ್ರಜ್ಞರನ್ನು ಪರಮಾನಂದ ಭರಿತರಾಗಿ ಪುನಃ ಪುನಃ ವಂದಿಸಿದರು.

ಸಭೆಯಲ್ಲಿ ತುಂಬಾ ಶ್ರೇಷ್ಠರೆನ್ನಿಸಿದ ಶ್ರೀ ಶೋಭನಭಟ್ಟರಿಂದ ಹೀಗೆ ವಂದಿತರಾದ ಶ್ರೀಮದಾಚಾರ್ಯರ ಹಿರಿಮೆ ಅದೆಷ್ಟು ಅಪಾರ ಎಂಬುದು ಇಲ್ಲಿ ಸೂಚಿತವಾಗಿದೆ.

ಶ್ರೀ ಶೋಭನಭಟ್ಟರ ಬಗ್ಗೆ ವ್ಯಾಖ್ಯಾನದಲ್ಲಿ ಬಂದಿರುವ ವಿವರ ಅತ್ಯಂತ ಗಮನಾರ್ಹ.

ವಾಯುದೇವಃ ಖಲು ಮಧ್ವ ಮುನಿಃ

ಸರ್ವಜ್ಞೋ**s**ತಿವಿಕ್ರಮೋ ಯೋ

ದಿಗ್ವಿಜಯಿನಂ ಚತುರ್ದಶವಿದ್ಯಂ

ಚತುರ್ದಶಭಿಃ ಕ್ಷಣೈರ್ನಿರ್ಜಿತ್ಯಾಸನಾನಿ

ತಸ್ಯ ಚತುರ್ದಶ ಜಗ್ರಾಹ ।

ಸ ಚ ತಚ್ಛಿಷ್ಯಃ ಪದ್ಮನಾಭಾಭಿಧಾನೋ

ಬಭೂವೇತಿ ಪ್ರಸಿದ್ಧಮ್ ।।

ವೇದ, ಶಾಸ್ತ್ರಗಳಲ್ಲಿ ಶ್ರೀಮದಾಚಾರ್ಯರನ್ನು ಪರಿ ಪರಿಯಾಗಿ ಪರೀಕ್ಷಿಸಿ ಪರಾಭವಗೊಂಡ ಸಿ ಶೋಭನಭಟ್ಟರು ಅವರನ್ನು ಸರ್ವಜ್ಞರೆಂದು ನಿಶ್ಚಯಿಸಿಕೊಂಡು ಆದರದಿಂದ ನಮಸ್ಕೃತರಾದವರು ಎಂಬುದು ಆ ಸಭೆಯ ಫಲಶ್ರುತಿಯಾಯಿತು.

" ಶೋಭನಭಟ್ಟಃ ವೇದ ಶಾಸ್ತ್ರೇಷು ಸಮ್ಯಕ್ ಮಧ್ವಾಚಾರ್ಯಾಂ ಪರೀಕ್ಷ್ಯ ಪರಾಭೂತಃ ಸ್ಯಾನ್ ಅಯಮೇವ ವಿಚಾರ ಪೂರ್ವಕಂ ನಿರ್ಣಯ ಕರ್ತೃಷು ಸರ್ವಜ್ಞಃ ಅಸ್ಮಾತ್ ವಿಶೇಷಂ ಜ್ಞಾಸ್ಯಾಮಿತಿ ಭಾವೇನ ಮಹಾ ಸಂತೋಷೇಣ ಆದರೇಣ ನನಾಮ ಇತಿ ಭಾವಃ ।। "

" ಶ್ರೀಮನ್ಮಧ್ವ ಭಾಷ್ಯ ಶ್ರವಣ "

ಈ ವಿಷಯವು ಸುಮಧ್ವ ವಿಜಯ **9**ನೇ ಸರ್ಗದ **18**ನೇ ಶ್ಲೋಕದಲ್ಲಿ ಉಲ್ಲೇಖಿತವಾಗಿದೆ.

ಯಸ್ತು ತಾರ್ಕಿಕ ಶಿಖಾಮಣಿಃ ಸುಧೀ-

www.bhargavasarma.blogspot.com

ರ್ವತಮಾನಸಮಯಾನ್ ನಿರಾಕರೋತ್ ।

ವೇದ ಭಾರತ ಪುರಾಣ ನಿಷ್ಠಿತೋ

ಭಾಷ್ಯಮೇತದ್ಯಶಣೋ ತ ಸ ಮಧ್ವತಃ ।।

ಆ ಕಾಲದಲ್ಲಿ ಎಲ್ಲಾ ಮತಗಳನ್ನು ಖಂಡಿಸುತಲಿದ್ದ ತರ್ಕ ಕೋವಿದರಾದ, ವೇದ ಭಾರತ ಪುರಾಣಗಳಲ್ಲಿ ನಿಷ್ಠೆ ಹೊಂದಿದ್ದ ನಿರ್ಮಲ ಮನಸ್ಸಿನ ಶ್ರೀ ಶೋಭನಭಟ್ಟರು ಈ ಬ್ರಹ್ಮಸೂತ್ರ ಭಾಷ್ಯವನ್ನು ಶ್ರೀಮದಾಚಾರ್ಯರಿಂದ ಶ್ರವಣ ಮಾಡಿದರು.

" ಅಮೃತಮಯವು ಶ್ರೀಮದಾಚಾರ್ಯರ ಭಾಷ್ಯ "

ಈ ವಿಷಯವು ಸುಮಧ್ವ ವಿಜಯ **9**ನೇ ಸರ್ಗದ **19**ನೇ ಶ್ಲೋಕದಲ್ಲಿ ಉಲ್ಲೇಖಿತವಾಗಿದೆ.

ನಾಪರೇಷು ರತಿಮಾಯಯೌ ಕ್ವಚಿದ್

ಭಾಷ್ಯಮದ್ಭುತಮಿದಂ ಸ ಶುಶ್ರುವಾನ್ ।

ನಾರವಿಂದಮಕರಂದಮಾಪ್ತವಾನ್

ಅಚ್ಛಪಿಚ್ಛ ಇವ ವಾಂಛತೀತರತ್ ।।

ಕಮಲ ಪುಷ್ಪದ ಮಕರಂದವನ್ನು ಪಾನ ಮಾಡಿದ ಬೈಲು ರೆಕ್ಕೆಗಳ ಹಂಸ ಪಕ್ಷಿಯು ಇತರ ಪುಷ್ಪಗಳ ರಸವನ್ನು ಹೇಗೆ ಬಯಸಲಾರದೋ ಹಾಗೆ ಪರಮ ಅದ್ಭುತವಾದ ಶ್ರೀಮಧ್ವ ಭಾಷ್ಯವನ್ನು ಶ್ರವಣ ಮಾಡಿದ ಶ್ರೀ ಶೋಭನಭಟ್ಟರು ಇತರೆ ಯಾವ ಭಾಷ್ಯಗಳಲ್ಲೂ ಅದರ ತಾಳವಿಲ್ಲ.

ಆಮುನ್ನ ಇತರ ಭಾಷೆಗಳನ್ನು ಅಧ್ಯಯನ ಮಾಡಿ ನಿರಾಶರಾಗಿದ್ದ ಶ್ರೀ ಶೋಭನಭಟ್ಟರಿಗೆ ಶ್ರೀಮಧ್ವ ಭಾಷ್ಯ ಶ್ರವಣದಿಂದ ಉಂಟಾದ ಆನಂದಕ್ಕೆ ಮಿತಿಯೇ ಇರಲಿಲ್ಲ.

" ಸಂನ್ಯಾಸ ಮತ್ತು ಶ್ರೀಮಧ್ವ ಮತ ಪ್ರಚಾರ "

" ಶ್ರೀ ಗುರು ಪುರಂದರದಾಸರು ತಮ್ಮ ಒಂದು ಸುಳಾದಿಯಲ್ಲಿ .."

(ಇವರು ಶ್ರೀ ಪುರಂದರದಾಸರ ಎರಡನೆ ಪುತ್ರರು. ಇವರು ಸೂರ್ಯಾಂಶರು)

www.bhargavasarma.blogspot.com

ತಾಳ : ತ್ರಿವಿಡಿ

ಇಳೆಯೊಳು ಮಧ್ವಮುನಿ ಸ್ಥಿರವಾಗಿ ಮತವ । ನಿಲ್ಲಿಸಬೇಕೆಂದು ಅನಾದಿ ಕಾಲದ ವೈಷ್ಣವ । ಸಿದ್ಧಾಂತ ನೆರೆದು ಶಿಷ್ಯರಿಗೆ । ವೇದವ್ಯಾಸ ನಲ್ಲಿಗೆ ಪೋಗಿ ಆಜ್ಞೆಯ ಕೊಂಡು । ಮರಳಿ ಬಾಹೋ । ಕಾಲದಲ್ಲಿ ಗೋದಾವರೀ ತೀರದಲ್ಲಿಯಿದ್ದಾ ದ್ವಿಜನಕರ । ತಂದು ಆಶ್ರಮವನಿತ್ತು ಪದುಮನಾಭನೆಂಬ ನಾಮವ । ಪಾಲಿಸಿ ಸರ್ವ ಶಾಸ್ತ್ರವನ್ನುಪದೇಶ ಮಾಡಿ ಅದೇ । ಕಾಲದಲ್ಲಿ ನರಹರಿ ಎಂಬೋನೊಬ್ಬ ದ್ವಿಜನು ಸಂನ್ಯಾಸ । ಕೊಡಬೇಕೆನಲು ಸುಖ ಪ್ರಾರಬ್ಧ ಉಂಟೆಂದು । ಪೂರ್ಣಬೋಧರು ಬಹು ವಿಧದಿಂದ ಅಂತಃಪ್ರೇರಕ । ಬುದ್ಧಿಬೆಕೆಂಬೋ ಬುದ್ಧಿ ಪ್ರೇರಿಸಿ । ತುರಿಯಾಶ್ರಮವನಿತ್ತು । ಮಧ್ವಮುನಿ ಶಾಸ್ತ್ರವ ಅಭ್ಯಾಸವನು ಮಾಡಿಸಿ । ಸಮೀಪದಲ್ಲಿ ಬಹು ದಿನವಿರಲು । ಆದರದೊಳೊಂದು ದಿನ ನರಹರಿ ಮುನಿಪನು । ತೀರ್ಥ ಯಾತ್ರೆಯನು ಮಾಡುವೆನೆಂದು ಸರ್ವಜ್ಞ । ಗುಣನಿಧಿಯು ಕೇಳಿದ ಕಾರಣ । ಆಜ್ಞೆಯಿತ್ತು ಗುರು ಪುರಂದರವಿಠ್ಠಲ । ವೇದವ್ಯಾಸನಲ್ಲಿ ಪೊರಟರಾಗಿ ।।

ಶ್ರೀ ಶೋಭನಭಟ್ಟರು ಪಂಡಿತರೂ, ಮೇಧಾವಿಗಳೂ ಮತ್ತು ವರ್ಚಸ್ವಿಗಳು.

ಶ್ರೀಮದಾಚಾರ್ಯರೊಡನೆ ವಾಕ್ಯಾರ್ಥ ಮಾಡಿ ಪರಾಜಿತರಾಗಿ - ಶಿಷ್ಯರಾಗಿ ಶ್ರೀಮದಾಚಾರ್ಯರಿಂದ ತುರ್ಯಾಶ್ರಮವನ್ನು ಸ್ವೀಕರಿಸಿ - " ಶ್ರೀ ಪದ್ಮನಾಭತೀರ್ಥ " ರೆಂದು ನಾಮಕರಣದೊಂದಿಗೆ ದ್ವೈತ ವೇದಾಂತ ದ್ವಿಗ್ವಿಜಯ ವಿದ್ಯಾ ಸಿಂಹಾಸನದಲ್ಲಿ ಶ್ರೀಮದಾಚಾರ್ಯರ ಅಮೃತಮಯವಾದ ಹಸ್ತಗಳಿಂದ ಪಟ್ಟಾಭಿಷಿಕ್ತರಾದರು.

ಅಲ್ಲಿಂದ ಮುಂದೆ ಶ್ರೀ ಪದ್ಮನಾಭತೀರ್ಥರ ವಿದ್ವತ್ಪ್ರೌಢಿಮೆ ಮತ್ತು ಕೀರ್ತಿ ಎಲ್ಲೆಡೆಯು ಹರಡಿತು.

ಈ ವಿಷಯವು ಸುಮಧ್ವ ವಿಜಯ **9**ನೇ ಸರ್ಗದ **20**ನೇ ಶ್ಲೋಕದಲ್ಲಿ ಉಲ್ಲೇಖಿತವಾಗಿದೆ.

ತತ್ರ ತತ್ರ ಸಭಾಸು ಭಾಸುರೋ

ನಂದಿತೀರ್ಥ ಸಮಯೋಕ್ತಯುಕ್ತಿಭಿಃ ।

ವಾದಿನೋ ವಿಶಕಲಯ್ಯ ತಾನ್ ಸಮಾ -

www.bhargavasarma.blogspot.com

ಕ್ರಮ್ಯವಾಚಮುಚಿತಾಮುದಾಹರತ್ ।।

ಅಲ್ಲಲ್ಲಿ ನಡೆಯುತ್ತಿದ್ದ ವಿದ್ವತ್ಸಭೆಗಳಲ್ಲಿ ತೇಜಸ್ವಿಗಳಾದ ಶ್ರೀ ಶೋಭನ ಭಟ್ಟರು ಶ್ರೀಮದಾಚಾರ್ಯರ ಸಿದ್ಧಾಂತದಲ್ಲಿ ಉಕ್ತವಾದ ಯುಕ್ತಿಗಳಿಂದ ಕುವಾದಿಗಳನ್ನು ಖಂಡಿಸುತ್ತಾ ಅವರಾರನ್ನೂ ಲೆಕ್ಕಿಸದೇ ಯೋಗ್ಯವಾದ ಮಾತನ್ನು ನುಡಿದರು.

ಶ್ರೀಮದಾಚಾರ್ಯರ ವಿಶೇಷಾನುಗ್ರಹದಿಂದ ಅವರ ಶಾಸ್ತ್ರವನ್ನು ಚೆನ್ನಾಗಿ ಬೇಗನೆ ಅರಿತ ಶ್ರೀ ಶೋಭನ ಭಟ್ಟರು ದುರ್ವಾದಿಗಳನ್ನು ಖಂಡಿಸುವ ಮೂಲಕ ಅದರ ಪ್ರಸಾರವನ್ನು ಸಹಾ ಪ್ರಾರಂಭಿಸಿಯೇಬಿಟ್ಟರು.

ಶ್ರೀ ಶೋಭನ ಭಟ್ಟರು ಶ್ರೀಮನ್ಮಧ್ವ ಶಾಸ್ತ್ರದ ಮೊದಲ ಶ್ರೋತೃ ಮಾತ್ರವಲ್ಲದೇ ಪ್ರಥಮ ಪ್ರಸಾರಕರೂ ಆದದ್ದು ಅವರ ಅಸಮಾನ್ಯ ಪ್ರಶಸ್ತಿ.

ಶ್ರೀ ಶೋಭನಭಟ್ಟರು ಮುಂದೆ ಶ್ರೀಮದಾಚಾರ್ಯರಿಂದ ಸಂನ್ಯಾಸಾಶ್ರಮ ದೀಕ್ಷೆಯನ್ನು ಪಡೆದು ಶ್ರೀ ಪದ್ಮನಾಭತೀರ್ಥರೆನಿಸಿ ಶ್ರೀಮದಾಚಾರ್ಯರ ನಂತರ ದ್ವೈತ ವೇದಾಂತ ದಿಗ್ವಿಜಯ ವಿದ್ಯಾ ಸಾಮ್ರಾಜ್ಯವನ್ನು ಅಲಂಕರಿಸಿದ ಮಹಾತ್ಮರು.

" ಬದರಿಕಾಶ್ರಮಾತ್ ಆಗಮನ ಕಾಲೇ ಯೋ ಆಗತಃ ಸ ಏವ ಶೋಭನಭಟ್ಟಃ ಅಯಂ ಪದ್ಮನಾಭತೀರ್ಥಃ ।। "

" ಶ್ರೀ ಪದ್ಮನಾಭತೀರ್ಥರ ಮಹಿಮೆ "

ಈ ವಿಷಯವು ಸುಮಧ್ವ ವಿಜಯ **15**ನೇ ಸರ್ಗದ **120**ನೇ ಶ್ಲೋಕದಲ್ಲಿ ಉಲ್ಲೇಖಿತವಾಗಿದೆ.

ಅಕೃಷ್ಟೋsಸ್ಯ ಗುಣೈರ್ವ್ಯಾಪ್ತೈರ್ಯೋ

ಗೋದಾಯಾ ಉಪಾಯಯೌ ।

ಸ ಪದ್ಮತೀರ್ಥಾಖ್ಯಃ ಶಿಷ್ಯೋsನ್ಯೋsಭೂತ್ ಸುಚೇತಸಃ ।।

www.bhargavasarma.blogspot.com

ಎಲ್ಲಡೆ ಪಸರಿಸಿದ ಶ್ರೀಮದಾಚಾರ್ಯರ ಗುಣಗಳಿಂದ ಆಕರ್ಷಿತರಾಗಿ ಗೋದಾವರೀ ತೀರದಿಂದ ಆಗಮಿಸಿದ್ದ ಶ್ರೀ ಪದ್ಮನಾಭತೀರ್ಥರೆಂಬುವರು ನಿರ್ಮಲ ಚಿತ್ತರಾದ ಶ್ರೀಮದಾನಂದತೀರ್ಥರ ಶ್ರೀಮದಾಚಾರ್ಯರ ಮತ್ತೊಬ್ಬ ಪ್ರಮುಖ ಶಿಷ್ಯರಾಗಿದ್ದರು.

ಶ್ರೀ ಪದ್ಮನಾಭತೀರ್ಥರು ಶ್ರೀ ವಿಷ್ಣುತೀರ್ಥರಂತೆ (ಶ್ರೀಮದಾಚಾರ್ಯರ ತಮ್ಮಂದಿರು) ಶ್ರೀಮದಾಚಾರ್ಯರ ಪ್ರಧಾನ ಶಿಷ್ಯರೂ ಎಂಬ ವಿವರ ಶ್ರೀ ಹೃಷಿಕೇಶತೀರ್ಥರ ಸಂಪ್ರದಾಯ ಪದ್ಧತಿಯಲ್ಲಿ ತಿಳಿಸಿದ ವಿವರ ಈ ಕೆಳಗಿನಂತಿದೆ.

" ಯಃ ಕರ್ನಾಟಕ ಪೂರ್ವ ಸಜ್ಜನ

ಗುರುಃ ಶ್ರೀ ಪದ್ಮನಾಭಾಹ್ವಯಃ "

" ಶ್ರೀ ಪದ್ಮನಾಭತೀರ್ಥರಿಗೆ ಆಧ್ಯಾತ್ಮ ವಿದ್ಯೋಪದೇಶ "

ಈ ವಿಷಯವು ಸುಮಧ್ವ ವಿಜಯ **15**ನೇ ಸರ್ಗದ **121**ನೇ ಶ್ಲೋಕದಲ್ಲಿ ಉಲ್ಲೇಖಿತವಾಗಿದೆ.

ಶ್ರುತ್ಯಾ ಮತ್ಯಾ ಸದಾ ಭಕ್ತ್ಯಾ

ವಿರಕ್ತ್ಯಾ ನಿತ್ಯ ಸೇವಯಾ ।

ಅಸ್ಮೈ ಪ್ರಸನ್ನಃ ಪ್ರಾಜ್ಯೇಕ್ಷಃ

ಸದ್ಯೋ ವಿದ್ಯಾಂ ದದೌ ಶುಭಾಮ್ ।।

ಶ್ರವಣ - ಮನನ ನಂತರವಾದ ಭಕ್ತಿ - ವಿರಕ್ತಿ ಮತ್ತು ನಿತ್ಯ ಸೇವೆಗಳಿಂದ ಪ್ರಸನ್ನರಾದ ಶ್ರೀ ಪೂರ್ಣಪ್ರಜ್ಞರು ಶ್ರೀ ಪದ್ಮನಾಭತೀರ್ಥರಿಗೆ ಆಗಲೇ ನಿರ್ಮಲವಾದ ಆಧ್ಯಾತ್ಮ ವಿದ್ಯೆಯನ್ನು ಉಪದೇಶಿಸಿದರು.

ಇದನ್ನು ಶ್ರೀ ಜಯತೀರ್ಥರು..

ಶ್ರೀಮಧ್ವಸಂಸೇವನಲಬ್ಧಶುದ್ಧ ವಿದ್ಯಾ ಸುಧಾಂಬೋನಿಧಯೋ**s**ಮಲಾಯೇ ।

ಕೃಪಾಲವಃ ಪಂಕಕನಾಭತೀರ್ಥಾಃ

www.bhargavasarma.blogspot.com

ಕೃಪಾಲವಃ ಸ್ಯಾನ್ಮಯಿ ನಿತ್ಯಮೇಷಾಮ್ ।।

" ಶ್ರೀ ಪದ್ಮನಾಭತೀರ್ಥರ ವಿದ್ಯಾ ವೈಭವ "

ಈ ವಿಷಯವು ಸುಮಧ್ವ ವಿಜಯ **15**ನೇ ಸರ್ಗದ **122**ನೇ ಶ್ಲೋಕದಲ್ಲಿ ಉಲ್ಲೇಖಿತವಾಗಿದೆ.

ವೇದಾಂತಾಬ್ಧಿಂ ನ ಯೋ ಜಾತು

ಜಹೌ ವಿದ್ವತ್ತಿಮಿಂಗಿಲಃ ।

ಯುಕ್ತಿ ಪ್ರವಾಹ ಸಂರಂಭಾತ್

ಪರಶಾಸ್ತ್ರನದೀಚರಃ ।।

ಯುಕ್ತಿ ಪ್ರವಾಹಗಳ ಮೇಲಿನ ಸೆಳೆತದಿಂದಾಗಿ ಇತರ ಶಾಸ್ತ್ರಗಳೆಂಬ ನದಿಗಳಲ್ಲಿ ಸಂಚರಿಸುವ ವಿದ್ವತ್ತಿಮಿಂಗಿಲರಾದ ಶ್ರೀ ಪದ್ಮನಾಭತೀರ್ಥರು ವೇದಾಂತ ಶಾಸ್ತ್ರವೆಂಬ ಸಮುದ್ರವನ್ನು ಒಮ್ಮೆಯೂ ತೊರೆಯಲೇ ಇಲ್ಲ**!!**

" ಶ್ರೀ ಪದ್ಮನಾಭತೀರ್ಥರ ವಾದಿ ದಿಗ್ವಿಜಯ "

ಈ ವಿಷಯವು ಸುಮಧ್ವ ವಿಜಯ **15**ನೇ ಸರ್ಗದ **123 & 124**ನೇ ಶ್ಲೋಕಗಳಲ್ಲಿ ಉಲ್ಲೇಖಿತವಾಗಿದೆ.

ವ್ಯಾಖ್ಯಾಪ್ರಣಾದಮಾತ್ರೇಣ

ವೀರಂ ಮನ್ಯಾನ್ ಸ್ವಮಂಡಲೇ ।

ಮಾಯಾವಿಗ್ರಾಮಸಿಂಹಾನ್ಯೋ

ವಾದಿ ಸಿಂಹೋ ನಿರಾಕರೋತ್ ।।

ವಾದಿ ಸಿಂಹರಾದ ಶ್ರೀ ಪದ್ಮನಾಭತೀರ್ಥರು -

www.bhargavasarma.blogspot.com

" ತಮ್ಮ ಗುಂಪಿನಲ್ಲಿ ತಾವೇ ವೀರರೆಂದು ಭಾವಿಸಿದ್ದ ಮಾಯಾವಾದಿಗಳೆಂಬ ಗ್ರಾಮ ಸಿಂಹಗಳನ್ನು ತಮ್ಮ ವ್ಯಾಖ್ಯಾನ ಧ್ವನಿಯೆಂಬ ಗರ್ಜನ ಮಾತ್ರದಿಂದಲೇ ಪರಾಭವ " ಗೊಳಿಸಿದರು.

ಮತ್ತದುರ್ವಾದಿಮಾಂತಗ-

ತರ್ಕ ಮಸ್ತಕ ಧಾರಣೇ ।

ಪಂಚಾಸ್ಯೋ ಯೋsಭವದ್ವ್ಯಕ್ತಂ

ಚತುರಾಸ್ಯೋsಪಿ ಕೇವಲಮ್ ।।

ಬರಿ ಚತುರಾಸ್ಯ (ಉತ್ತಮ ವಾಗ್ಮಿ) ರಾದ ಅವರು ಮದಿಸಿದ ದುರ್ವಾದಿಗಳೆಂಬ ಆನೆಗಳ - ಯುಕ್ತಿಗಳೆಂಬ ಕುಂಭಸ್ಥಳಗಳನ್ನು ಸೀಳುವ ಕಾರ್ಯದಲ್ಲಿ ಪಂಚಾಸ್ಯ (ಸಿಂಹ) ರೇ ಆಗಿದ್ದರು.

" ಸನ್ಯಾಯ ರತ್ನಾವಳೀ ರಚನೆ "

ಈ ವಿಷಯವು ಸುಮಧ್ವ ವಿಜಯ **15**ನೇ ಸರ್ಗದ **125**ನೇ ಶ್ಲೋಕದಲ್ಲಿ ಉಲ್ಲೇಖಿತವಾಗಿದೆ.

ಸನ್ಯಾಯರತ್ನಾವಲಿರಪ್ಯುದಪಾದಿ ಯತಃ ಶುಭಾ ।

ಟೀಕಾ ಪರಾsನುವ್ಯಾಖ್ಯಾಯ ಅನರ್ಘಾ ಬೋಧ ಸಾಗರಾತ್ ।।

ಜ್ಞಾನ ಸಮುದ್ರರಾದ ಆ ಶ್ರೀ ಪದ್ಮನಾಭತೀರ್ಥರಿಂದ ಉತ್ತಮವಾದ ಶ್ರೀಮದಾಚಾರ್ಯರ " ಅನುವ್ಯಾಖ್ಯಾನ " ವೆಂಬ ಗ್ರಂಥಕ್ಕೆ " ಸನ್ಯಾಯ ರತ್ನಾವಲಿ " ಎಂಬ ಮಂಗಳಕರವಾದ ಅಮೂಲ್ಯವಾದ ಟೀಕೆ ಉತ್ಪನ್ನವಾಯಿತು.

ಶ್ರೀ ಪದ್ಮನಾಭತೀರ್ಥರು ಸನ್ಯಾಯರತ್ನಾವಲಿಯಲ್ಲಿ..

ಶ್ರೀ ಪದ್ಮನಾಭಯತಿ ಸಿಂಧುಸಮುತ್ಥಿತೇಯಂ

ಸನ್ಯಾಯಪರಮಾವಲಿರುಜ್ಜ್ವಲಾsಲಮ್ ।

ಭೂಯಾದಶೇಷ ಸುಜನೌಘ ಸುಖೈಕಹೇತುಃ

www.bhargavasarma.blogspot.com

ಸೂತ್ರಾನುಭಾಷ್ಯಪದದೀಪನದೀಪರೂಪ ।।

ಶ್ರೀ ಪದ್ಮನಾಭತೀರ್ಥರ ಪಾಂಡಿತ್ಯವನ್ನು ಶ್ರೀ ಟೀಕಾಕೃತ್ಪಾದರು ಬಹುವಾಗಿ ಸ್ತುತಿಸಿದ್ದಾರೆ.

ಶ್ರೀಮನ್ನ್ಯಾಯಸುಧೆಯಲ್ಲಿ ಶ್ರೀ ಜಯತೀರ್ಥರು..

ರಮಾನಿವಾಸಿತೋಚಿತ ವಾಸ ಭೂಮಿಃ

ಸನ್ನ್ಯಾಯರತ್ನಾವಲಿ ಜನ್ಮಭೂಮಿಃ ।

ವೈರಾಗ್ಯಭಾಗ್ಯೋ ಮಮ ಪದ್ಮನಾಭ -

ತೀರ್ಥಾಮೃತಾಬ್ಧಿರ್ಭವತಾದ್ವಿಭೂತ್ಯೈಃ ।।

" ತತ್ತ್ವ ಪ್ರಕಾಶಿಕೆ " ಯಲ್ಲಿ..

ಶ್ರೀಮಧ್ವಸಂಸೇವನಲಬ್ಧಶುದ್ಧ ವಿದ್ಯಾ ಸುಧಾಂಬೋನಿಧಯೋsಮಲಾಯೇ ।

ಕೃಪಾಲವಃ ಪಂಕಕನಾಭತೀರ್ಥಾಃ

ಕೃಪಾಲವಃ ಸ್ಯಾನ್ಮಯಿ ನಿತ್ಯಮೇಷಾಮ್ ।।

" ವೇದ ಪ್ರವಚನಾಚಾರ್ಯರಾದ ಶ್ರೀ ಮನ್ಮಧ್ವರ ಶಿಷ್ಯ "

ಈ ವಿಷಯವು ಸುಮಧ್ವ ವಿಜಯ **15**ನೇ ಸರ್ಗದ **126**ನೇ ಶ್ಲೋಕದಲ್ಲಿ ಉಲ್ಲೇಖಿತವಾಗಿದೆ.

ವೇದ ಪ್ರವಚನಾಚಾರ್ಯ

ಶಿಷ್ಯೋsಸಾವಿತಿ ಪೂಜಿತಃ ।

ಸಭ್ಯಃ ಸಭಾಯಾಂ ಯೋ ವೇದಂ

ವ್ಯಾಚಖ್ಯೌ ವೇದಸಾರವಿತ್ ।।

www.bhargavasarma.blogspot.com

ಸಭಾ ಭೂಷಣರಾದ, ವೇದಗಳ ತಾತ್ಪರ್ಯವನ್ನು ಬಲ್ಲವರಾದ ಶ್ರೀ ಪದ್ಮನಾಭತೀರ್ಥರು " ವೇದ ಪ್ರವಚನಾಚಾರ್ಯರಾದ ಶ್ರೀಮದಚಾರ್ಯರ ಶಿಷ್ಯರಿವರು " ಎಂದು ಪೂಜಿತರಾಗಿ ಸಭೆಗಳಲ್ಲಿ ವೇದವನ್ನು ವ್ಯಾಖ್ಯಾನಿಸಿದರು.

" ಶ್ರೀಮದಾಚಾರ್ಯರ ಆಜ್ಞೆ "

ಶ್ರೀ ಪದ್ಮನಾಭತೀರ್ಥರನ್ನು ಕರೆದು ಶ್ರೀಮದಾಚಾರ್ಯರು..

" ನಮಗೆ ಒಲಿದು ಬಂದ ಶ್ರೀ ಚತುರ್ಮುಖ ಬ್ರಹ್ಮ ದೇವರ ಕರಾರ್ಚಿತ ಶ್ರೀಮನ್ಮೂಲರಗುಪತಿ ಮತ್ತು ನಮ್ಮಿಂದ ನಿರ್ಮಿತವಾಗಿ ಪೂಜಿಸಲ್ಪಟ್ಟ ದಿಗ್ವಿಜಯರಾಮನ ಪ್ರತಿಮೆಗಳ ಪೂಜೆಯ ಅವಕಾಶವನ್ನು ನಿಮಗೆ ನೀಡುತ್ತಿದ್ದೇವೆ.

ಮುಂದೆ ಇವುಗಳು ನಮ್ಮ ಮೂಲ ಮಹಾ ಸಂಸ್ಥಾನದಲ್ಲಿ ಪ್ರಧಾನ ಪ್ರತಿಮೆಗಳಾಗಲಿ " ಎಂದು ಆಜ್ಞಾಪಿಸಿದರು.

ಶ್ರೀಮದಾಚಾರ್ಯರ ಆಜ್ಞೆಯಂತೆ ಅಂದಿನಿಂದ ಇಂದಿನ ವರೆಗೂ ಆ ಶ್ರೀ ಮೂಲ - ದಿಗ್ವಿಜಯ ರಾಮದೇವರ ಪ್ರತಿಮೆಗಳು..

" ಸಾಕ್ಷಾತ್ ಹಂಸನಾಮಕ ಪರಮಾತ್ಮನಿಂದ ಅವಿಚ್ಛಿನ್ನವಾಗಿ ನಡೆದು ಬಂದ ಜಗದ್ಗುರು ಶ್ರೀ ಮನ್ಮಧ್ವಾಚಾರ್ಯರ ಮೂಲ ಮಹಾ ಸಂಸ್ಥಾನವಾದ ಶ್ರೀ ರಾಘವೇಂದ್ರಸ್ವಾಮಿಗಳವರ ಮಠದ ಪರಂಪರೆಯಿಂದ ಪೂಜೆ ಗೊಳ್ಳುತ್ತಾ ಬಂದು ಪ್ರಸ್ತುತ ಪರಮಪೂಜ್ಯ ಶ್ರೀ ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಅಮೃತ ಹಸ್ತಗಳಲ್ಲಿ ಪೂಜೆಗೊಳ್ಳುತ್ತಿವೆ.

ಉರವಣಿಸಿ ಬಾಹ ತಟಕಿಯ ಮಹಾ ।

ಕರಗಳ ನಿಮಿಷದಿ ಕತ್ತರಿಸುಯೆಂದು ।

ಹಿರಿಯರು ಪೇಳಲು ಇದಿರು ಪೇಳದೆ ಅಸುರೆಯ ।।

ಕರಗಳ ಕಡೆದ ವಿಜಯೀಂದ್ರರಾಮ ।

ಸರಸಿಜಾಸನ ವಿನುತ ಸಿರಿ ಮೂಲರಾಮ ।।

www.bhargavasarma.blogspot.com

ಎಂದು ಶ್ರೀ ಬ್ರಹ್ಮದೇವರ ಕರಾರ್ಚಿತ ಮೂಲರಾಮನು ಶ್ರೀ ರಾಯರ ಮಠದಲ್ಲಿ ವಿರಾಜಮಾನನಾಗಿದ್ದಾನೆಂದು ಶ್ರೀ ವಿಜಯೀಂದ್ರತೀರ್ಥರು ಖಚಿತ ಪಡಿಸಿದರೆ,

" ವಂದೇ ಮುಕುಂದ ಮುಚುಕುಂದ ಪರಿಪಾಲಕ " ಎಂಬ ಸುಳಾದಿಯಲ್ಲಿ..

ಆನಂದತೀರ್ಥರ ಮನದಲ್ಲಿನಿಂದ । ಅತಿ ನಿರ್ಮಳ ಪಾದ ಅಪ್ರಾಕೃತ ಪಾದ । ಇಂದ್ರ ಗೋಪದಂತೆ ವರ್ಣದಿಂದೊಪ್ಪುವ । ಅಂದವಾದ ದಿಗ್ವಿಜಯರಾಮಚಂದ್ರಾ ।।

ಎಂದು ಶ್ರೀ ಮದಾನಂದತೀರ್ಥರ ಕರಾರ್ಚಿತ ಶ್ರೀ ದಿಗ್ವಿಜಯರಾಮದೇವರು ಶ್ರೀ ರಾಯರ ಮಠದಲ್ಲಿ ನೆಲೆ ನಿಂತಿದ್ದಾನೆಂದು ಶ್ರೀ ಭೃಗು ಮಹರ್ಷಿಗಳ ಅವತಾರರಾದ ಶ್ರೀ ವಿಜಯರಾಯರು ಖಚಿತ ಪಡಿಸಿದ್ದಾರೆ.

" ಶಿಷ್ಯ ಸ್ವೀಕಾರ "

ಶ್ರೀ ಲಕ್ಷ್ಮೀಧರತೀರ್ಥರಿಗೆ ಆಶ್ರಮ ಕೊಟ್ಟು ತಮಗೆ ಶ್ರೀಮದಾಚಾರ್ಯರಿಂದ ಕೊಡಲ್ಪಟ್ಟ ಶ್ರೀ ಗೋಪಿನಾಥದೇವರನ್ನು ಶ್ರೀ ಲಕ್ಷ್ಮೀಧರತೀರ್ಥರಿಗೆ ಕೊಟ್ಟು ಅನುಗ್ರಹಿಸಿದರು.

ಆ ಪರಂಪರೆಯು ಇಂದಿಗೂ ನಡೆದು ಬಂದು ಶ್ರೀ ಶ್ರೀಪಾದರಾಜ ಮಠವೆಂದು ಜಗತ್ಪ್ರಸಿದ್ಧವಾಗಿದೆ.

ಆ ಪರಂಪರೆಯ ಪ್ರಸ್ತುತ ಪೀಠಾಧಿಪತಿಗಳು ಪರಮಪೂಜ್ಯ ಶ್ರೀ ಕೇಶವನಿಧಿತೀರ್ಥ ಶ್ರೀಪಾದಂಗಳವರು!!

" ಅವತಾರ ಸಮಾಪ್ತಿ "

ಹೀಗೆ ಶ್ರೀ ಪದ್ಮನಾಭತೀರ್ಥರು ಸುಪ್ರಸಿದ್ಧ ಗ್ರಂಥ ಕರ್ತೃಗಳಾಗಿ **6** ವರ್ಷಗಳು **290** ದಿನಗಳ ಪರ್ಯಂತ ದ್ವೈತ ವೇದಾಂತ ದಿಗ್ವಿಜಯ ವಿದ್ಯಾ ಸಾಮ್ರಾಜ್ಯದಲ್ಲಿ ವಿರಾಜಮಾನರಾಗಿ ಶ್ರೀ ಮೂಲರಾಮನ ಪೂಜೆಯನ್ನು ಮಾಡಿದ ವಿವರವನ್ನು ಶ್ರೀ ನಾರದಾಂಶ ಪುರಂದರದಾಸರು ಈ ರೀತಿ ವರ್ಣಿಸಿದ್ದಾರೆ.

www.bhargavasarma.blogspot.com

ಪದುಮನಾಭಯತಿ ತಾನು ದಶಮತಿಗೆ ಅರ್ಪಿಸಲು । ಮುದದಿ ಮೂರು ಮಾಸದಿ । ಹದಿಮೂರು ದಿನವು । ಮದನನಯ್ಯನ ಪೂಜಿಸಿ ಕೊಡಲು ತಾವು । ಪೂ । ಜಿಸಿದ ಆರು ವರುಷ ಇನ್ನೂರ ತೊಂಭತ್ತು ದಿನ ।।

ಶ್ರೀಮದಾಚಾರ್ಯರ ಆದೇಶದಂತೆ ಶ್ರೀ ನರಹರಿತೀರ್ಥರಿಗೆ ಮೂಲ ಸಂಸ್ಥಾನವನ್ನೂ; ಮೂಲ ಸಂಸ್ಥಾನದ ಪ್ರತಿಮೆಗಳನ್ನೂ ವಹಿಸಿ ಕೊಟ್ಟು ಕ್ರಿ. ಶ. **1324**ರ ರಕ್ತಾಕ್ಷಿ ನಾಮ ಸಂವತ್ಸರದ ಕಾರ್ತೀಕ ಬಹುಳ ಚತುರ್ದಶೀ ದಿನದಂದು ತುಂಗಭದ್ರಾ ನದೀ ನಡುಗಡ್ಡೆಯಲ್ಲಿರುವ " ಗಜಗಹ್ವರ " (ನವ ವೃಂದಾವನ ಗಡ್ಡೆ) ಯಲ್ಲಿ ಶ್ರೀ ಮನ್ಮೂಲರಘುಪತಿವೇದವ್ಯಾಸೋsಭಿನ್ನ ಶ್ರೀ ಹರಿಯ ಪಾದಾರವಿಂದ ಸೇರಿದರು.

ಪೂರ್ಣಪ್ರಜ್ಞಕೃತಂ ಭಾಷ್ಯಮಾದೌ

ತದ್ಭಾವ ಪೂರ್ವಕಮ್ ।

ಯೋ ವ್ಯಾಕರೋನ್ನಮಸ್ತಸ್ಮೈ

ಪದ್ಮನಾಭಾಖ್ಯ ಯೋಗಿನೇ ।।

ಶ್ರೀ ಕಾರ್ಪರ ನರಹರಿ ದಾಸರ ನುಡಿಗಳಲ್ಲಿ..

ರಾಗ : ಕಮಾಚ್ ತಾಳ : ಆದಿ

ಪದ್ಮನಾಭರ ಭಜಿಸೋ

ಹೇ ಮನುಜಾ ನೀ ।। ಪಲ್ಲವಿ ।।

ಮಧ್ವರಾಯರ ಕರಪದ್ಮ

ಸಂಭವರಾದ ।। ಅ. ಪ ।।

ಮತ್ತ ಮಾಯಿಗಗಳೆಂಬೋ

ಹಸ್ತಿ ಗಣಕೆ ಪಂಚ ।

www.bhargavasarma.blogspot.com

ವಕ್ರರೆಂದೆನಿಸಿದ ಪೃಥ್ವೀ

ಸುರಾ ಸೇವಿತ ।। ಚರಣ ।।

ಪ್ರೀತಿಯಿಂದಲಿ ಗೋಪೀನಾಥ-

ನರ್ಚಿಸಿ । ಸುಖ ।

ತೀರ್ಥ ಗ್ರಂಥಕೆ ಸುವ್ಯಾಖ್ಯಾತ್ರ-

ರೆಂದೆನಿಸಿದ ।। ಚರಣ ।।

ಧರೆಯೊಳು ಶರಣರ

ಪೊರೆವ । ಕಾರ್ಪರ ।

ನರಹರಿಯ ನೊಲಿಸಿದಂಥ

ಪರಮ ಮಹಿಮರಾದ ।। ಚರಣ ।।

(Sangraha - My grateful thanks to the original author of this Kannada script for sharing additional information about Sri Padmanabha Theertharu)

www.bhargavasarma.blogspot.com